# ಕೃಷಿ ವಿಶ್ವವಿದ್ಯಾಲಯ, ಧಾರವಾಡ

**ಅರಣ್ಯ ಮಹಾವಿದ್ಯಾಲಯ, ಶಿರಸಿ–581 401 ಉ.ಕ. ಜಿಲ್ಲೆ ಕರ್ನಾಟಕ**

*ಮಿಂಚಂಚೆ: deanforestry@uasd.in* **Phone: 08384-226146**


ಸಂ. ಡೀನ್(ಅ)/ಅ.ಮ.ವಿ.ಶಿರಸಿ/ತಾ.ನೇ/719–A/2023–24

ಅರಣ್ಯ ಮಹಾವಿದ್ಯಾಲಯ, ಶಿರಸಿ
ದಿನಾಂಕ: 09–11–2023.

## ಅಧಿಸೂಚನೆ

ವಿಷಯ: ಅರಣ್ಯ ಮಹಾವಿದ್ಯಾಲಯ, ಶಿರಸಿಯಲ್ಲಿ ಅರೆಕಾಲಿಕ ಉಪನ್ಯಾಸಕರ ಹುದ್ದೆಗೆ ತಾತ್ಕಾಲಿಕ ನೇಮಕಾತಿ ಕುರಿತು.

ಉಲ್ಲೇಖ: ಪರವಾನಿಗೆ ಪತ್ರ ಸಂ. ಕುಸ:ನೇವಿ:ತಾನೇ:ಆರ್/401/D/2023-24/2585/ದಿನಾಂಕ:07-11-2023.

******

ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಅರಣ್ಯ ಮಹಾವಿದ್ಯಾಲಯ, ಶಿರಸಿಯಲ್ಲಿ 2023–24ನೇ ಸಾಲಿನ **1st B.Sc 1ನೇ ಸೆಮಿಸ್ಟರ** ವಿದ್ಯಾರ್ಥಿಗಳಿಗೆ ಕೆಳಗಿನ ವಿಷಯಗಳನ್ನು ಭೋದಿಸಲು ಅರೆಕಾಲಿಕ ಉಪನ್ಯಾಸಕರನ್ನು ತಾತ್ಕಾಲಿಕ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳ ಅವಧಿಯು **179 ದಿನಗಳು ಅಥವಾ ಸೆಮಿಸ್ಟರ್ ಅಂತ್ಯದವರೆಗೆ ಯಾವುದು ಮೊದಲು ಅದು ಇರುತ್ತದೆ** ಹಾಗೂ ಕೃವಿವಿಯಿಂದ ನಿಗದಿಪಡಿಸಲಾದಂತೆ ರೂ.2000/– (Per Contact hour-practical or theory not exceeding Rs.40000/- pm) ರ ಗೌರವಧನ ಇರುತ್ತದೆ.

| Name of the Post | No. of Post | Course Name. | Course No. & Credit Hours | Class | Educational Qualification |
|---|---|---|---|---|---|
| Part time Teachers* | 01 | Information and Communication Technology | ICT 101 [1+1] | 1st B. Sc (Forestry) | Post-graduation degree in Computer Science or equivalent qualification from the UGC recognized University. * |
| | 01 | Communication Skills in English & Personality Development | ENG 102 [1+1] | 1st B. Sc (Forestry) | Post-graduation degree in English or equivalent qualification from the UGC recognized University. * |
| | 01 | ಕನ್ನಡ ಕೃಷಿ ಭಾಗ–1 / ಕನ್ನಡ ಭಾಷೆ–1 | KAN 101/ KNK 101 [0+1*] | 1st B. Sc (Forestry) | Post-graduation degree in Kannada or equivalent qualification from the UGC recognized University. * |

*** ಪದವಿ ಮಟ್ಟದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ ಅನುಭವವುಳ್ಳವರಿಗೆ ಮತ್ತು NET ತೇರ್ಗಡೆಯಾದವರಿಗೆ ಆದ್ಯತೆ ನೀಡಲಾಗುವದು.**

ನೇಮಕಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಇದರೊಂದಿಗಿನ ಅರ್ಜಿ ನಮೂನೆಯ ಎರಡು ಪ್ರತಿಗಳೊಂದಿಗೆ ದಿನಾಂಕ: **23-11-2023** ರಂದು **ಮುಂಜಾನೆ 10.00** ಗಂಟೆಗೆ ಡೀನ್ (ಅರಣ್ಯ) ಅರಣ್ಯ ಮಹಾವಿದ್ಯಾಲಯ, ಶಿರಸಿರವರ ಕಾರ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ. ಸಂದರ್ಶನಕ್ಕೆ ಬರುವಾಗ ತಮ್ಮ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ಮೂಲ ದಾಖಲೆಗಳನ್ನು ಹಾಗೂ ಅವುಗಳ ಎರಡು ಧೃಡಿಕೃತ ಪ್ರತಿಗಳನ್ನು ಸಂದರ್ಶನದ ಸಮಯದಲ್ಲಿ ತರಲು ತಿಳಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು.

ಸಂದರ್ಶಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು. ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಯಾವುದೇ ಕಾರಣ ತಿಳಿಸದೇ ತೆಗೆದುಹಾಕಲಾಗುವುದು ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿಗಾಗಿ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.

(ಆರ್ ವಾಸುದೇವ)
ಡೀನ್ (ಅರಣ್ಯ)
ಅರಣ್ಯ ಮಹಾವಿದ್ಯಾಲಯ
ಶಿರಸಿ - 581 401

ಪ್ರತಿಯನ್ನು

1. ಶಿಕ್ಷಣ ನಿರ್ದೇಶಕರು/ ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಆಡಳಿತಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಮಾಹಿತಿಗಾಗಿ
2. ಸಂಶೋಧನಾ ನಿರ್ದೇಶಕರು/ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ಧಾರವಾಡ.
3. ಡೀನ್(ಸ್ನಾತಕೋತ್ತರ)/ ಡೀನ್(ಕೃಷಿ), ಕೃಷಿ ಮಹಾವಿದ್ಯಾಲಯ, ಧಾರವಾಡ/ವಿಜಯಪುರ/ಹನುಮನಮಟ್ಟಿ.
4. ಕುಲಸಚಿವರು, ಕವಿವಿ, ಪಾವಟೆನಗರ, ಧಾರವಾಡ ಇವರಿಗೆ ಮಾಹಿತಿಗಾಗಿ.
5. ಕಾರ್ಯಕ್ರಮ ಸಂಯೋಜಕರು, ಕೃ.ವಿ.ಕೇಂದ್ರ, ಧಾರವಾಡ/ವಿಜಯಪುರ/ಬಾಗಲಕೋಟ/ಹನುಮನಮಟ್ಟಿ/ಶಿರಸಿ.
6. **ಗ್ರಂಥಪಾಲಕರು, ಕೃ.ವಿ.ವಿ,ಧಾರವಾಡ**–ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲು ಕೋರಲಾಗಿದೆ.
7. **ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಾರವಾರ**–ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.